ಮೇಲೆ ಹುದ್ದೆಗಳನ್ನು ತುಂಬಲು ನಿಯಮಗಳನ್ನು ರೂಪಿಸುತ್ತಿರುವುದರಿಂದ ಸದ್ಯಕೆ ಈ ರೀತಿಯ ನೇಮಕಾತಿಗಳನ್ನು ಸ್ಥಗಿತಗೊಳಿಸಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವ ನೌಕರರ ಸೇವೆಯನ್ನು ಸಕ್ರಮಗೊಳಿಸಿ ಆಯಾ ಜಿಲ್ಲೆಗಳ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ 'ಡಿ' ಗ್ರೂಪ್ ನೌಕರರ ಹುದ್ದೆಗಳನ್ನು ತುಂಬುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ದಿನಾಂಕ 22-11-95 ರ ಆದೇಶದಲ್ಲಿ ಅಧಿಕಾರವನ್ನು ನೀಡಲಾಗಿದೆ. ಈ ಒನ್ನೆಲೆಯಲ್ಲಿ ಈ ರೀತಿ ಸೇವಾ ಸಕ್ರಮಗೊಂಡ ದಿನಗೂಲಿ ನೌಕರರನ್ನು ಇಲಾಖೆಯಲ್ಲಿ ಖಾಲಿ ಇರುವ 'ಡಿ' ಗ್ರೂಪ್ ಹುದ್ದೆಗಳಲ್ಲಿ ತುಂಬಲು ದಿನಾಂಕ 26-3-96 ರಂದು ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ. ಆದಷ್ಟು ಶೀಘ್ರದಲ್ಲಿಯೇ ತೆರವು ಇರುವ ಸಿಪಾಯಿ ಹುದ್ದೆಗಳನ್ನು ಭರ್ತಿ ಮಾಡಲು ಆಗತ್ಯ ಕ್ರಮ ಕೈಗೊಳ್ಳಲಾಗುವುದು.

(ಈ) ಹುಬ್ಬಳ್ಳಿಯ ಬಿ.ಡಿ.ಕೆ. ಇಂಡಸ್ಟ್ರೀಸ್ ನೌಕರರ ಬೇಡಿಕೆ.

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿಯ ಬಿ.ಡಿ.ಕೆ. ಇಂಡಸ್ಟ್ರೀಯ ನೌಕರರು ಹಗಲಿರುಳು ಬೆವರು ಸುರಿಸಿ ದುಡಿಯುತ್ತಿದ್ದಾರ್ಯೂ, ಕಾರ್ಮಿಕರಿಗೆ ದುಡಿತಕ್ಕೆ ತಕ್ಕ ವೇತನ ಮತ್ತು ಸೌಕರ್ಯ ದೊರೆಯದೆ ಇದ್ದಾಗ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಅವರು ಸಂಘಟಿತರಾಗಿ ಹೋರಾಟ ಕೈಗೊಂಡಾಗ ಆಡಳಿತ ವರ್ಗವು ಸೇಡಿನ ಮನೋಭಾವನೆಯಿಂದ ತನ್ನ ನೌಕರರನ್ನು ಬೇರೆ ಯಾವುದೋ ಸಂಸ್ಥೆಗೆ ವರ್ಗಾವಣೆ ಮಾಡುವುದು ಮತ್ತು ಸಂಸ್ಥೆಯ 27 ಜನ ನೌಕರರ ಮೇಲೆ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲು ಮಾಡಿಸಿ ಹೆದರಿಕೆ ಹುಟ್ಟಿಸುವುದು ಮತ್ತು ಇದನ್ನು ಪ್ರತಿಭಟಿಸಿದ ಸಂಸ್ಥೆಯ ನೌಕರರನ್ನು ಹೊರಹಾಕಿ ದಿನಗೂಲಿ ನೌಕರರು ಹಾಗೂ ಬೇರೆ ಸಂಸ್ಥೆಯ ನೌಕರರ ಸಹಾಯದಿಂದ ಆಡಳಿತ ವರ್ಗ ಕೆಲಸ ನಿಭಾಯಿಸುತ್ತಿರುವುದು ನಡೆದಿದ್ದು, ಬಿ.ಡಿ.ಕೆ. ನೌಕರರ ವರ್ಗ ತೀರಾ ಅನ್ಯಾಯಕ್ಕೆ ಮತ್ತು ತುಳಿತಕ್ಕೆ ಒಳಗಾಗಿದ್ದು ಕಾರಣ ಸರ್ಕಾರ ತಕ್ಷಣ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಿ ನೌಕರರ ನ್ಯಾಯಯುತ ಬೇಡಿಕೆಗಳು ಈಡೇರಿಸುವಂತೆ ಬಿ.ಡಿ.ಕೆ. ಆಡಳಿತ ವರ್ಗದ ಮೇಲೆ ಒತ್ತಡ ತರಬೇಕಾಗಿ ನಾನು ಈ ಮೂಲಕ ಕಾರ್ಮಿಕ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) :- ಮಾನ್ಯ ಉಪಾಧ್ಯಕ್ಷರೇ.....

ಬಿ.ಡಿ.ಕೆ. ಇಂಜಿನಿಯರಿಂಗ್ ಮತ್ತು ಬಿ.ಡಿ.ಕೆ. ಪ್ರಿಸಿಷನ್ ಕಂಟ್ರೋಲ್ ಕಾರ್ಖಾನೆಗಳು ಒಬ್ಬ ಆಡಳಿತ ವರ್ಗದವರದೇ ಆಗಿದ್ದು, ಒಂದೇ ಆವರಣದಲ್ಲಿ ಇರುತ್ತವೆ. ಈ ಎರಡೂ ಕಾರ್ಖಾನೆಗಳಲ್ಲಿ ಒಟ್ಟು 280 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ದಿನಾಂಕ 15-7-1996 ರಂದು ಆಡಳಿತ ವರ್ಗದವರಾದ ಮೆಸರ್ಸ್ ಬಿ.ಡಿ.ಕೆ. ಪ್ರಿಸಿಷನ್ ಕಂಟ್ರೋಲ್ಸ್ (ಪ್ರೈವೇಟ್) ಲಿಮಿಟೆಡ್, ಹುಬ್ಬಳ್ಳಿ, ಇವರು ಅವರ ನೌಕರ ರೊಬ್ಬರನ್ನು ಮೆ. ವಾಲೆಕ್ಟ್ ಕಾರ್ಖಾನೆ, ಲಕೇನಹಳ್ಳಿ, ಇಲ್ಲಿಗೆ ವರ್ಗಾಯಿಸಿದ ಆದೇಶವನ್ನು ಸದರಿ ನೌಕರರಿಗೆ ನೀಡಲು ಹೋದಾಗ, ತಿರಸ್ಕರಿಸಿರುತ್ತಾರೆ. ನೌಕರರ ಪ್ರಕಾರ ಈ

ಆದೇಶವು ದುರುದ್ದೇಶ ಭಾವನೆಯಿಂದ ಮಾಡಲಾಗಿದೆಯೆಂದು ಆರೋಪಿಸಿರುತ್ತಾರೆ. ದಿನಾಂಕ 16-7-1996 ರಂದು ಸದರಿ ನೌಕರನನ್ನು ಕಾರ್ಖಾನೆಯ ಒಳಗೆ ಕೆಲಸಕ್ಕೆ ಆಡಳಿತ ವರ್ಗದವರು ಬಿಡದೆ ಇದ್ದುದರಿಂದ ಎಲ್ಲಾ ಕಾರ್ಮಿಕರು ಈ ನೌಕರನ ವರ್ಗಾವಣೆ ಆದೇಶವನ್ನು ರದ್ದುಪಡಿಸಬೇಕೆಂದು ಬೇಡಿಕೆಯನ್ನಿಟ್ಟು ಮುಷ್ಕರ ಹೂಡಿದ್ದರು. ಇದೇ ಸಂದರ್ಭದಲ್ಲಿ ಆಡಳಿತ ವರ್ಗದವರನ್ನೇ ಕಾರ್ಖಾನೆಯ ಒಳಗೆ ಬಿಡದೆ ತಡೆದಿದ್ದಾರೆಂದು ತಿಳಿಸಲಾಗಿದೆ.

ದಿನಾಂಕ 18-7-1996 ರಂದು ಸಹಾಯಕ ಕಾರ್ಮಿಕ ಆಯುಕ್ತರು ಕರೆದಿದ್ದ ಸಭೆಯಲ್ಲಿ ಉಭಯತ್ರರು ಹಾಜರಿದ್ದರು. ನೌಕರರ ಪರವಾಗಿ ಧಾರವಾಡ ಜಿಲ್ಲಾ ಮಜ್ದೂರ್ ಸಂಘದ ಪ್ರತಿನಿಧಿಗಳು ಹಾಜರಿದ್ದರು. ಆಡಳಿತ ವರ್ಗದವರು ಸದರಿ ಕಾರ್ಮಿಕ ಸಂಘದ ಜೊತೆ ಚರ್ಚಿಸುವುದಿಲ್ಲವೆಂಬ ಆಕ್ಷೇಪಣೆ ಎತ್ತಿ, ಕಾರ್ಮಿಕರ ಜೊತೆ ನೇರವಾಗಿ ಚರ್ಚಿಸುವುದಾಗಿ ತಿಳಿಸಿರುತ್ತಾರೆ. ಆಡಳಿತ ವರ್ಗದವರು ಅಕ್ರಮವಾಗಿ ಬಿ.ಕೆ.ಡಿ. ಕಾರ್ಖಾನೆಗೆ ಸಂಬಂಧವಿಲ್ಲದ ಕಾರ್ಖಾನೆಗೆ ವರ್ಗಾವಣೆ ಮಾಡಿರುತ್ತಾರೆಂದು ಸಂಘದವರು ಆರೋಪಿಸಿರುತ್ತಾರೆ. ವರ್ಗಾವಣೆಯ ಕ್ರಮಬದ್ಧತೆಯನ್ನು ಪ್ರತಿಪಾದಿಸುವ ಬಗ್ಗೆ ದಾಖಲೆಗಳ ಸಮೇತ ಹಾಜರಿರಬೇಕೆಂದು ಸಭೆಯನ್ನು ದಿನಾಂಕ 20-7-1996 ಕ್ಕೆ ಮುಂದೂಡಲಾಯಿತು. ಆದರೆ ದಿನಾಂಕ 20-7-96ರ ಸಭೆಯಲ್ಲಿ ಆಡಳಿತ ವರ್ಗದವರು ಆಶ್ಚರ್ಯಕರವಾಗಿ ಹೇಳಿಕೆ ನಿಡಿ, ಯಾವ ನೌಕರನನ್ನೂ ವರ್ಗಾವಣೆ ಮಾಡಿಲ್ಲವೆಂದು ತಿಳಿಸಿದ್ದರಿಂದ, ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡು ದಿನಾಂಕ 22-7-1996 ರಿಂದ ಕೆಲಸಕ್ಕೆ ಹಾಜರಾಗಿರುತ್ತಾರೆ.

ಏತನ್ಮಧ್ಯೆ, ಆಡಳಿತ ವರ್ಗದವರು 36 ಮಂದಿ ಕಾರ್ಮಿಕರನ್ನು ಅಮಾನತ್ತಿನಲ್ಲಿಟ್ಟು ಒಬ್ಬರ ಹೊರತು ಉಳಿದ ಕಾರ್ಮಿಕರ ಮೇಲೆ ಸದರಿ ಆದೇಶಗಳನ್ನು ನೀಡಿರುತ್ತಾರೆ.

ಪೋಲೀಸ್ ಇಲಾಖೆಯ ವತಿಯಿಂದ ಆಡಳಿತ ವರ್ಗದವರನ್ನು ಕಾರ್ಖಾನೆಯ ಒಳಗೆ ಬಿಡಲಿಲ್ಲವೆಂಬ ಆರೋಪದ ಮೇಲೆ 36 ಮಂದಿ (27+9) ಕಾರ್ಮಿಕರ ಮೇಲೆ ಕೇಸನ್ನು ದಾಖಲು ಮಾಡಿರುವುದಾಗಿ ತಿಳಿದು ಬಂದಿದೆ.

ಮುಂದಿನ ರಾಜೀ ಸಂಧಾನ ಸಭೆಯು ದಿನಾಂಕ 25-7-1996 ರಂದು ಕರೆಯಲಾಗಿದ್ದು, ಕಾರ್ಮಿಕ ಆಯುಕ್ತರು ಮಧ್ಯೆ ಪ್ರವೇಶಿಸಿ, ವಿವಾದವನ್ನು ಇತ್ಯರ್ಥಗೊಳಿಸಲು ನಿರ್ದೇಶಿಸಲಾಗಿದೆ.

(ಉ) ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಸೇತುವೆ ರಿಪೇರಿ.

ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) :- ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕರೋಪಾಡಿ ಗ್ರಾಮದ ಆನೆಕಲ್ಲು ಎಂಬಲ್ಲಿ ಒಂದು ಸೇತುವೆ ಇದೆ. ಇದು ಇರುವುದು ಕೇರಳ ಕರ್ನಾಟಕ ಗಡಿ ಪ್ರದೇಶದಲ್ಲಿ ಸೇತುವೆಯ ಅರ್ಧಭಾಗ ಕೇರಳ ರಾಜ್ಯಕ್ಕೆ ಮತ್ತು ಇನ್ನುಳಿದ ಅರ್ಧಭಾಗ ಕರ್ನಾಟಕ ರಾಜ್ಯಕ್ಕೆ ಸೇರಿರುತ್ತದೆ. ಸೇತುವೆಯು ನಾಡುರಸ್ತೆಯಲ್ಲಿದ್ದು ಬೀಳುವ ಹಂತದಲ್ಲಿದೆ. ಕೇರಳ ಸರಕಾರವು ಅವರಿಗೆ ಸೇರಿದ ಸೇತುವೆಯ ಭಾಗವನ್ನು ರಿಪೇರಿ ಮಾಡಿರುತ್ತಾರೆ. ಆದರೆ ನಮ್ಮ ರಾಜ್ಯಕ್ಕೆ ಸೇರಿದ ಸೇತುವೆಯ ಭಾಗವನ್ನು ರಿಪೇರಿ